ಬೇಡ್ತಿ ನದಿಗಳನ್ನು ಸೇರಿಸಿ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿಗೆ ನೀರು ಹರಿಸುವ ಯೋಚನೆ ಮಾಡಿದ ಸರ್ಕಾರ ಅದಕ್ಕಿನ್ನೂ ಕೈ ಹಾಕಿಲ್ಲ.

## ಕನ್ನಾಡಿನ 'ಅಪ್ಪಿಕೋ ಚಳವಳಿ'

ಇದು ಎಂಬತ್ತರ ದಶಕದ ಮೊದಲಾರ್ಧದಲ್ಲಿ ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ನಡೆದ ಹೋರಾಟ. ನೈಸಗಿಕ ಅರಣ್ಯಗಳಲ್ಲಿ ಬೆಳೆದ ವಿವಿಧ ಜಾತಿಯ ಮರಗಳನ್ನು ವಾಣಿಜ್ಯ ಕಾರಣಗಳಿಗಾಗಿ ಕಡಿಯುವುದನ್ನು ವಿರೋಧಿಸಲು ರೂಪಿಸಲಾದ ಸಂಘಟಿತ ಹೋರಾಟ ಕರ್ನಾಟಕದ ಇತರ ಸಾಮಾಜಿಕ–ಪರಿಸರ ಹೋರಾಟಗಳಿಗೆ ಕಸುವು ತುಂಬಿತು. ಪಾಂಡುರಂಗ ಹೆಗಡೆ ನೇತೃತ್ವದಲ್ಲಿ ಒಗ್ಗೂಡಿದ ಉತ್ತರ ಕನ್ನಡ ಜಿಲ್ಲೆಯ ಕೃಷಿಕರು, ಗೌಳಿಗರು, ಆದಿವಾಸಿಗಳು, ಮರ ಕಡಿಯಲು ಬಂದ ಸರ್ಕಾರಿ ಬಂಟರನ್ನು ಅಲ್ಲಿಂದ ಕಾಲ್ತೆಗೆಯುವಂತೆ ಮಾಡಲು ಮರಗಳನ್ನು ತಾವೇ ಅಪ್ಪಿ ಹಿಡಿದು, 'ಧೈರ್ಯವಿದ್ದರೆ ಮುಂದೆ ಬನ್ನಿ' ಎಂದು ಸವಾಲೆಸೆದರು. ಉತ್ತರಖಂಡದ ಚಿಪ್ಕೋ ಚಳವಳಿಯ ಅನುಕರಣೆಯಂತಿದ್ದ ಇದು ನಮ್ಮಲ್ಲಿ 'ಅಪ್ಪಿಕೋ ಚಳವಳಿ' ಎಂದು ಖ್ಯಾತವಾಯಿತು. ದಟ್ಟ ಅರಣ್ಯಗಳ ಮಧ್ಯೆ ಕಾಲ್ನಡಿಗೆ ಜಾಥಾ, ಜಾನಪದ ನೃತ್ಯ, ಸ್ಲೈಡ್ ಶೋ, ಬೀದಿನಾಟಕ, ಗ್ರಾಮಸಭೆ, ಹೀಗೆ ಹಲವಾರು ವಿಧ–ಮಾದರಿಗಳ ಮೂಲಕ ಕಾಡಿನ, ಕಾಡಂಚಿನ ಗ್ರಾಮದ ಜನರಲ್ಲಿ ಜಾಗೃತಿ ಮೂಡಿಸಿದ ಚಳವಳಿಯಾಗಿ ರೂಪುಗೊಂಡ ಇದು, 'ಕಡಿದ ಮರಗಳ ಜಾಗದಲ್ಲಿ ಹೊಸ ಮರಗಳು ಬರಬೇಕು, ಅದು ಏಕಸಸ್ಯ ನೆಡುತೋಪು ಆಗಿರಬಾರದು' ಎಂದು ಆಗ್ರಹಿಸಿತು. ನಂತರ ಚಳವಳಿಯು, ಅರಣ್ಯ ಉತ್ಪನ್ನಗಳನ್ನು ಸಂತುಲಿತ ಮಾದರಿಯಲ್ಲಿ ಬಳಸುವ ತೀರ್ಮಾನ ಕೈಗೊಂಡು ನೈಸರ್ಗಿಕ ಅರಣ್ಯಗಳ ಮೇಲೆ ಯಾವುದೇ ಅನಗತ್ಯ ಹಾಗೂ ಅವೈಜ್ಞಾನಿಕ ಒತ್ತಡ ಉಂಟಾಗದಂತೆ ಕ್ರಮ ವಹಿಸಲು ಸರ್ಕಾರವನ್ನು ಒತ್ತಾಯಿಸುವಲ್ಲಿ ಯಶಸ್ವಿಯಾಯಿತು.

## ಪಶ್ಚಿಮಘಟ್ಟ ಉಳಿಸಿ ಅಭಿಯಾನ

ವಿಶ್ವದ 18 ಅತೀ ಸೂಕ್ಷ್ಮ ಜೀವ ವೈವಿಧ್ಯದ ತಾಣಗಳಲ್ಲೊಂದಾದ ಪಶ್ಚಿಮ ಘಟ್ಟವನ್ನು ಉಳಿಸಿ ಸಂರಕ್ಷಿಸಬೇಕೆನ್ನುವ ದೊಡ್ಡ ಮಟ್ಟದ ಅಭಿಯಾನ ಇಂದಿಗೆ ಮೂರು ದಶಕಗಳ ಹಿಂದೆ ನಡೆಯಿತು. ಬರಹಗಾರರು, ಸ್ವಯಂ ಸೇವಾ ಸಂಸ್ಥೆಗಳು, ವೈದ್ಯರು, ವಿಜ್ಞಾನಿಗಳು, ವಕೀಲರು, ವಿದ್ಯಾರ್ಥಿಗಳು, ಸಾಮಾಜಿಕ ಕಾರ್ಯಕರ್ತರು, ಪತ್ರಕರ್ತರು, ಸಿನಿಮಾ ನಟರು ಸೇರಿದಂತೆ ಸಮಾಜದ ವಿವಿಧ ವರ್ಗಗಳ ಜೊತೆ ನೂರೈವತ್ತಕ್ಕೂ ಹೆಚ್ಚು ಸಂಘಟನೆಗಳು, ಸ್ಥಳೀಯರನ್ನೊಳಗೊಂಡ ಕಾಲುನಡಿಗೆ ಸತತ ನೂರು ದಿನಗಳವರೆಗೆ ನಡೆಯಿತು. ಪಶ್ಚಿಮಘಟ್ಟ ಹಬ್ಬಿರುವ ದೇಶದ ಆರು



ರಾಜ್ಯಗಳ ಪೈಕಿ ಐದು ರಾಜ್ಯಗಳ ಜನ ಇದರಲ್ಲಿ ರಿಲೇ ಮಾದರಿಯಲ್ಲಿ ಪಾಲ್ಗೊಂಡರು. 600 ಸಭೆಗಳು ನಡೆದವು. ಅತಿ ಕಿರಿಯ ಹೋರಾಟಗಾರ ಕನ್ಯಾಕುಮಾರಿಯ 6 ವರ್ಷದ ಗೌತಮ ಕೂಡ ನಡಿಗೆಯಲ್ಲಿ ಭಾಗವಹಿಸಿದ. ಕರ್ನಾಟಕ, ಕೇರಳ, ಗೋವಾ, ಮಹಾರಾಷ್ಟ್ರ, ತಮಿಳುನಾಡು ಹಾಗೂ ಗುಜರಾತ್‌ಗಳಲ್ಲಿ 1600 ಕಿ.ಮೀ. ಉದ್ದದ ವ್ಯಾಪ್ತಿ ಇರುವ ಪಶ್ಚಿಮ ಘಟ್ಟಗಳ ಉದ್ದಕ್ಕೂ ಅಭಿಯಾನಕ್ಕೆ ಬೆಂಬಲ ದೊರೆಯಿತು.

ಕರ್ನಾಟಕದಲ್ಲಿ, ಸಾಹಿತಿ ಶಿವರಾಮ ಕಾರಂತರು ನೇತೃತ್ವ ವಹಿಸಿ ಚಳವಳಿಗೆ ಬೌದ್ಧಿಕ ಬಲ ತುಂಬಿದರು. ಗೋವಾದಲ್ಲಿ 5 ದಿನಗಳ ಬೃಹತ್ ಸಮಾವೇಶದೊಂದಿಗೆ ಅಭಿಯಾನ ಮುಕ್ತಾಯವಾಯಿತು. ಘಟ್ಟದಲ್ಲಿ ಹುಟ್ಟುವ ನದಿಗಳು, ಹುಲಿ ಸಂರಕ್ಷಿತ ಅರಣ್ಯಗಳು, ದೇವರ ಕಾಡುಗಳು, ಔಷಧ ವನಗಳು, ವಿವಿಧ ಜಾತಿಯ ಅಪರೂಪದ ಮರಗಳು, ಬೆಟ್ಟ ಪ್ರದೇಶಗಳು, ಜಲಪಾತಗಳು, ಹುಲ್ಲು ಬೆಟ್ಟಗಳು, ಕಣಿವೆಗಳು, ಅಪರೂಪದ ಶೋಲಾ ಅರಣ್ಯಗಳು – ಹೀಗೆ, ಹಲವಾರು ಬಗೆಯ ಜೀವಿ ಆವಾಸಗಳನ್ನು ರಕ್ಷಿಸಲು ನಡೆದ ಬೃಹತ್ ಹೋರಾಟದ ಹಿನ್ನೆಲೆಯಲ್ಲಿ 1988ರಲ್ಲಿ 'ಜೀವವೈವಿಧ್ಯದ ಹಾಟ್‌ಸ್ಪಾಟ್' ಪರಿಕಲ್ಪನೆ ಮೊದಲ ಬಾರಿಗೆ ಚಾಲ್ತಿಗೆ ಬಂತು.

1987ರ ನವೆಂಬರ್‌ನಲ್ಲಿ ಪ್ರಾರಂಭವಾದ ಅಭಿಯಾನ 1988ರ ಫೆಬ್ರುವರಿಯಲ್ಲಿ ಮುಕ್ತಾಯವಾಯಿತು. ಪಶ್ಚಿಮ ಘಟ್ಟದ ಜೀವವೈವಿಧ್ಯ ಮತ್ತು ಮಹತ್ವದ ಕುರಿತು ಅರಿವು ಮೂಡಿಸುವುದು, ವನ್ಯಜೀವಿಗಳನ್ನು ರಕ್ಷಿಸುವುದು, ಘಟ್ಟವನ್ನು ನಾಶಮಾಡುತ್ತಿರುವ ಅಭಿವೃದ್ಧಿ ಯೋಜನೆಗಳ ಕುರಿತು ವಸ್ತುನಿಷ್ಠ ಅಧ್ಯಯನ ನಡೆಸುವುದು, ಕಡಿದ ಕಾಡನ್ನು ಪುನರ್ ರಚಿಸುವುದು, ಘಟ್ಟದ ಉಳಿವಿಗಾಗಿ ಹೋರಾಡುತ್ತಿರುವ ವಿವಿಧ ಸಂಘಟನೆಗಳನ್ನು ಒಗ್ಗೂಡಿಸಿ ದೀರ್ಘಕಾಲೀನ ಕಾರ್ಯತಂತ್ರ ರೂಪಿಸುವುದು, ಸರ್ಕಾರ ಮತ್ತು ಸ್ವಯಂಸೇವಾ ಸಂಘಟನೆಗಳು, ಸಂರಕ್ಷಣಾ ತಜ್ಞರು ಹಾಗೂ ಸರ್ಕಾರದಿಂದ ಪರವಾನಗಿ ಪಡೆದ ಸಂಸ್ಥೆಗಳ ನಡುವೆ ಸಮನ್ವಯ ಸಾಧಿಸುವುದು ಮುಂತಾದ ಆದ್ಯತೆಗಳೊಂದಿಗೆ ಪ್ರಾರಂಭವಾದ ಅಭಿಯಾನ ಬಹುತೇಕ ಯಶಸ್ವಿಯಾಯಿತು. ಅಭಿಯಾನದಲ್ಲಿ ಸಮಾಜ ಪರಿವರ್ತನಾ ಸಮುದಾಯದ ನಾಯಕರು, ಅನಂತ ಹೆಗಡೆ ಆಶೀಸರ, ಮೇಡ್ಲೇರಿಯ ಎನ್.ಆರ್. ಹಿರೇಮಠ ಮುಂತಾದವರು ಮುಂಚೂಣಿಯಲ್ಲಿ ನಿಂತು ಅಭಿಯಾನದ ಯಶಸ್ಸಿಗೆ ಕಾರಣರಾದರು.

## ಕೈಗಾ ಅಣುಸ್ಥಾವರ ವಿರೋಧಿ ಚಳವಳಿ

ರಾಮಕೃಷ್ಣ ಹೆಗಡೆ ಮುಖ್ಯ ಮಂತ್ರಿಯಾಗಿದ್ದ ಕಾಲ. ತಮ್ಮ ಜಿಲ್ಲೆಯ ಹಿತಕಾಯುತ್ತೇನೆಂದು ಹೇಳಿದ ಅವರು, ವಿದ್ಯುತ್ ಉತ್ಪಾದನೆಗಾಗಿ ಜಲವನ್ನಾಶ್ರಯಿಸಿದರೆ ಅರಣ್ಯ ನಾಶವಾಗುತ್ತದೆ; ಆದ್ದರಿಂದ ಮುಂದುವರೆದ ದೇಶಗಳ ಮಾದರಿಯಲ್ಲಿ ನಮ್ಮಲ್ಲೂ ಅಣುಸ್ಥಾವರ